# ಇನ್ಫೆಂಟ್ ಜೀಸಸ್ ಶಾಲೆ



ಕದ್ರಿ ಮಿದ್ರಿ, ಮೂಗ್ತಿಹಳ್ಳಿ, ಚಿಕ್ಕಮಗಳೂರು

## ಶಾಲಾ ವಾರ್ಷಿಕ ವರದಿ : 04.02.2012

"ಪ್ರಭುವಿನ ಆವರಣದಲಿ ನಿಲ್ಲಿರಿ ಸ್ತುತಿಸ್ತೋತ್ರಗಳೊಂದಿಗೆ, ಆತನ ನಾಮವನು ಕೊಂಡಾಡಿ ಉಪಕಾರಸ್ಮರಣೆಯೊಂದಿಗೆ" ಬೈಬಲ್ ಶ್ರೀಗ್ರಂಥದ ಸ್ತುತಿಗೀತೆಯ ಮೊದಲ ಸ್ತೋತ್ರವನ್ನು ಭಜಿಸುತ್ತಾ, ಈ ನಮ್ಮ ಇನ್ಫೆಂಟ್ ಜೀಸಸ್ ಶಾಲೆಯಲ್ಲಿ ಮಹತ್ಕಾರ್ಯಗಳನ್ನೆಸಗಿದ ದಯಾಮಯ ದೇವರಿಗೆ ಕೃತಜ್ಞತೆ, ವಂದನೆ, ಸ್ತುತಿಸ್ತೋತ್ರ. ಶಾಲಾ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಶ್ರೀ ಎಸ್. ಜಿ. ನಾಗೇಶ್‌ರವರೇ, ಮುಖ್ಯ ಅತಿಥಿಗಳಾದ ವಂದನೀಯ ಗುರು ಆಗ್ನೆಲ್ ಫೆರ್ನಾಂಡಿಸ್‌ರವರೇ ಹಾಗೂ ವಂದನೀಯ ಗುರು ಚೇತನ್ ಲಿಯೋ ಲೋಬೊರವರೇ, ಗೌರವಾನ್ವಿತ ಅತಿಥಿಗಳಾದ ಶ್ರೀಮತಿ ನಾಗರತ್ನಮ್ಮನವರೇ ಮತ್ತು ಎಸ್. ಟಿ. ಚಂದ್ರೇಗೌಡರೇ, ಶಾಲಾ ಪೋಷಕ ಸಂಘದ ಅಧ್ಯಕ್ಷರಾದ ಅಮರ್ ಡಿಸೋಜಾರವರೇ, ಗುರುಹಿರಿಯರೇ, ಶಾಲಾ ಶಿಕ್ಷಕ/ಶಿಕ್ಷಕಿಯರೇ, ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯವರೇ ಹಾಗೂ ಇಲ್ಲಿ ನೆರೆದಿರುವ ಸರ್ವ ಸಭಿಕರೇ, ನಮ್ಮ ಶಾಲಾ ವಾರ್ಷಿಕ ವರದಿಯನ್ನು ನಿಮ್ಮ ಮುಂದಿಡಲು ಹೆಮ್ಮೆ ಪಡುತ್ತೇನೆ.

ತಮ್ಮ ನಿಸ್ವಾರ್ಥ ಸೇವೆ, ಸೋದರತ್ವ, ಪರಿಸರ ಸಂರಕ್ಷಣೆಗೆ ಹೆಸರುವಾಸಿಯಾಗಿರುವ ಇಟಲಿ ದೇಶದ ಅಸ್ಸಿಸ್ಸಿಯ ಸಂತ ಫ್ರಾನ್ಸಿಸ್ಸರ ಅನುಯಾಯಿಗಳಾದ ಕಪುಚಿನ್ ಸಹೋದರರಿಂದ 2005ರಲ್ಲಿ ನಿಮ್ಮೆಲ್ಲರ ವಿನಂತಿಯ ಮೇರೆಗೆ, ಚಿಕ್ಕಮಗಳೂರಿನ ಪಾರ್ವತೀಪುರದಲ್ಲಿರುವ ಬಾಲಯೇಸು ನಿವಾಸದಲ್ಲಿ ನಮ್ಮ ಈ ಇನ್ಫೆಂಟ್ ಜೀಸಸ್ ಶಾಲೆಯು ಎಲ್.ಕೆ.ಜಿ.ಯಿಂದ ಪ್ರಾರಂಭವಾಗಿ ಪ್ರಸ್ತುತ ಐದನೇ ತರಗತಿಯ ಮೆಟ್ಟಿಲನ್ನು ತಲುಪಿದೆ. ಯಥಾ ಪ್ರಕಾರ ಈ ವರ್ಷ ಏಳನೇ ಶಾಲಾ ವಾರ್ಷಿಕೋತ್ಸವವನ್ನು ಅತೀ ವಿಜೃಂಭಣೆಯಿಂದ ಆಚರಿಸಲು ನಾವೆಲ್ಲರೂ ಸಜ್ಜಾಗಿದ್ದೇವೆ. ಪ್ರಸ್ತುತ ನಮ್ಮ ಶಾಲಾ ಆಗರದಲ್ಲಿ 18 ಜನ ಶಿಕ್ಷಕರು ಬೋಧಿಸುತ್ತಿದ್ದು, 4 ಮಂದಿ ಬೋಧಕೇತರ ಸಿಬ್ಬಂದಿಯನ್ನು ಒಳಗೊಂಡ 22 ಜನರು ನಮ್ಮ ಶಾಲೆಯ 547 ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೋಸ್ಕರ ಹಗಲೂ ರಾತ್ರಿ ಶ್ರಮಿಸುತ್ತಿದ್ದಾರೆ. ಜೊತೆಗೆ ಪ್ರಸ್ತುತ ವರ್ಷದಿಂದ ಅರ್ಸುಲೈನ್ ಫ್ರಾನ್ಸಿಸ್ಕನ್ ಸಭೆಯ ಸಿಸ್ಟರ್ಸ್‌ರವರು ಪಾಠ ಪ್ರವಚನ ಮಾಡುವುದೊಂದು ವರದಾನ.

ಸ್ಮಾರ್ಟ್ ಕ್ಲಾಸ್ ಶಿಕ್ಷಣದ ವ್ಯವಸ್ಥೆಯು ಈ ವರ್ಷದ ಹೊಸತನ. ಮಕ್ಕಳಿಗೆ ಸಾಮಾನ್ಯ ಪಾಠಗಳನ್ನು ಆಧುನಿಕ ಡಿಜಿಟಲ್ ಪದ್ಧತಿಯಲ್ಲಿ ಕಲಿಸುವುದು. ಇದು ಹಲವಾರು ವಿದ್ಯಾರ್ಥಿಗಳ ಗಮನ ಸೆಳೆದು ಈ ವರ್ಷ ಸುಮಾರು 248 ಹೊಸವಿದ್ಯಾರ್ಥಿಗಳು ಶಾಲೆಗೆ ಪ್ರವೇಶಿಸಿದ್ದಾರೆ. ಪ್ರತಿಯೋರ್ವ ವಿದ್ಯಾರ್ಥಿಗೆ ಎಲ್.ಕೆ.ಜಿ.ಯಿಂದಲೇ ಕಂಪ್ಯೂಟರ್ ತರಬೇತಿಯನ್ನು ನೀಡಲಾಗುತ್ತಿದೆ. ಮಕ್ಕಳಿಗೆ ಆಟೋಟಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಮೂಡಿಸಲು ಈ ವರ್ಷದಿಂದ ಒಬ್ಬ ದೈಹಿಕ ಶಿಕ್ಷಕರನ್ನು ನೇಮಿಸಲಾಗಿದೆ. ನೂತನ ಶಾಲಾ ಬ್ಯಾಂಡ್‌ನ್ನು ಇಂದು ನೀವು ವೀಕ್ಷಿಸಿದ್ದೀರಿ, ಇದಕ್ಕೆ ತರಬೇತಿ ನೀಡಲು ಬ್ಯಾಂಡ್ ಮಾಸ್ಟರ್ ಶ್ರೀಯುತ ಚಲುವಾಡ್‌ರವರು ಬಿಡುವು ಸಮಯದಲ್ಲಿ ಬಂದು ಉತ್ತಮ ಮಾರ್ಗದರ್ಶನ ನೀಡಿ ನಮ್ಮ ವಿದ್ಯಾರ್ಥಿಗಳನ್ನು ಕೇವಲ 30 ದಿನಗಳಲ್ಲಿ ಸಿದ್ಧಪಡಿಸಿದ್ದು ಒಂದು ಅದ್ಭುತವೇ ಸರಿ.

ಶಾಲೆಯಲ್ಲಿ ಎಲ್ಲಾ ಚಟುವಟಿಕೆಗಳಿಗೆ ಆದ್ಯತೆ ನೀಡಲಾಗಿದೆ. ಶನಿವಾರದಂದು ಪಠ್ಯೇತರ ಚಟುವಟಿಕೆಗಳಾದ ವಾದ್ಯ, ಸಂಗೀತ, ಶಾಸ್ತ್ರೀಯ ಮತ್ತು ಜನಪದ ನೃತ್ಯ, ಯೋಗ, ಚಿತ್ರಕಲೆ, ಶಿಲ್ಪಕಲೆ, ಟೆಕ್ವಾಂಡೊ, ಇತ್ಯಾದಿ ಹತ್ತು ಹಲವಾರು ವಿಷಯಗಳ ಬಗ್ಗೆ ಆಸಕ್ತಿ ಇರುವ ಎಲ್ಲಾ ವಿದ್ಯಾರ್ಥಿಗಳಿಗೆ ಉತ್ತಮ ತರಬೇತಿ ನೀಡಲು ಪ್ರಖ್ಯಾತ ಹಾಗೂ ನುರಿತ ತರಬೇತುದಾರರನ್ನು ನೇಮಿಸಲಾಗಿದೆ. ಸ್ಕೌಟ್ಸ್ ಮತ್ತು ಗೈಡ್ಸ್ ಈ ಶೈಕ್ಷಣಿಕ ವರ್ಷದ ಇನ್ನೊಂದು ಆಕರ್ಷಣೆ. ಡಿಸೆಂಬರ್ ತಿಂಗಳ 15ರಂದು ನಮ್ಮ ಶಾಲೆಯಲ್ಲಿ ಸ್ಕೌಟ್ಸ್, ಗೈಡ್ಸ್, ಕಬ್ಸ್ ಮತ್ತು ಬುಲ್‌ಬುಲ್ ತಂಡಗಳನ್ನು ಅಧಿಕೃತವಾಗಿ ಜಿಲ್ಲಾ ಚೀಫ್ ಕಮಿಶನರ್ ಶ್ರೀ ಷಡಕ್ಷರಿಯವರು ಉದ್ಘಾಟಿಸಿದರು. ಈ ತಂಡದಲ್ಲಿ ಸುಮಾರು 108 ವಿದ್ಯಾರ್ಥಿಗಳು (28 ಸ್ಕೌಟ್ಸ್, 22 ಗೈಡ್ಸ್, 30 ಕಬ್ಸ್ ಮತ್ತು 28 ಬುಲ್ ಬುಲ್ಸ್) ಸ್ವಇಚ್ಛೆಯಿಂದ ಸೇರಿ, ಶಿಸ್ತುಬದ್ಧವಾಗಿ ಜೀವಿಸಿ, ದೇಶದ ಉನ್ನತ ಪ್ರಜೆಗಳಾಗುತ್ತೇವೆಂದು ಪ್ರತಿಜ್ಞೆಮಾಡಿದರು. ಪ್ರಸ್ತುತ ನಮ್ಮ ಶಾಲೆಯಲ್ಲಿ 6 ಜನ ಶಿಕ್ಷಕರು ಸ್ಕೌಟ್ಸ್, ಗೈಡ್ಸ್, ಕಬ್ಸ್ ಮತ್ತು ಬುಲ್‌ಬುಲ್ ತರಬೇತಿಯನ್ನು ಪಡೆದು ವಿದ್ಯಾರ್ಥಿಗಳಿಗೆ ಪ್ರತಿ ಗುರುವಾರದಂದು ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆಂದು ಹೇಳಲು ನನಗೆ ಹೆಮ್ಮೆ.

ಪೋಷಕ–ಶಿಕ್ಷಕರ ಸಭೆಯನ್ನು ಜುಲೈ ತಿಂಗಳಲ್ಲಿ ನಡೆಸಿ ನೂತನ ಪದಾಧಿಕಾರಿಗಳನ್ನು ಚುನಾಯಿಸಲಾಯಿತು. ಈ ಸಮಿತಿಯ 7 ಸದಸ್ಯರು ಈ ವರ್ಷದಲ್ಲಿ 5 ಬಾರಿ ಸಭೆ ಸೇರಿ ಶಾಲಾ ಅಭಿವೃದ್ಧಿಗೋಸ್ಕರ ಶ್ರಮಿಸಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಲ್ಲದೇ, ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮದಲ್ಲಿ ಸರ್ವಸಭಿಕರಿಗೆ ಸಿಹಿತಿಂಡಿಯನ್ನು ಉಚಿತವಾಗಿ ಹಂಚಿದ್ದಾರೆ. ಅವರೆಲ್ಲರಿಗೂ ನಾನು ಚಿರಋಣಿ. ಕಳೆದ ವರ್ಷ ನಮ್ಮ ಶಾಲೆಯಲ್ಲಿ ಸುಮಾರು 50 ವಿದ್ಯಾರ್ಥಿಗಳು ಪ್ರತಿದಿನ ಶಾಲೆಗೆ ಬಂದು ನೂರಕ್ಕೆ ನೂರು ಹಾಜರಾತಿಗಳಿಸಿದ್ದನ್ನು ಗುರುತಿಸಿ ಅವರಿಗೆ ಸನ್ಮಾನಿಸಿದ್ದು ಮಾತ್ರವಲ್ಲ, ಈ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಅವರಿಗೆ ಎಲ್ಲಾ ಪಠ್ಯಪುಸ್ತಕಗಳನ್ನು ಉಚಿತವಾಗಿ ನೀಡಲಾಗಿದೆ. ಇದನ್ನು ಮನಗಂಡ 200 ವಿದ್ಯಾರ್ಥಿಗಳು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿಯೂ 100% ಹಾಜರಾತಿ ಗಳಿಸಿದ್ದಾರೆ. ಅವರೆಲ್ಲರನ್ನೂ ಈ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಇಂತಹ ಇನ್ನೊಂದು ಕಾರ್ಯಕ್ರಮವನ್ನು ಏರ್ಪಡಿಸಿ ಗೌರವಿಸಲಾಗುವುದು. ಈ ಉತ್ತಮ ಕೆಲಸಕ್ಕೆ ಸಹಕಾರ, ಪ್ರೋತ್ಸಾಹ ಹಾಗೂ ಉದಾರ ದಾನವನ್ನು ನೀಡಿದ ಸರ್ವರಿಗೆ ನಾನು ಅಬಾರಿ.

ನಮ್ಮ ಶಾಲಾ ಅಂತರ್ಜಾಲ (website: www.ijsckm.org) ಮೂಲಕ ನಮ್ಮ ಎಲ್ಲಾ ಚಟುವಟಿಕೆಗಳ ವಿವರ ಹಾಗೂ ಮಾಹಿತಿಯನ್ನು ಇಡೀ ಪ್ರಪಂಚಕ್ಕೆ ಪ್ರಕಟಿಸಲಾಗಿದೆ. ವಿದೇಶಲ್ಲಿರುವ ನಮ್ಮ ಸ್ನೇಹಿತರು ಹಾಗು ಹಿತೈಷಿಗಳು ಈ ಅಂತರ್ಜಾಲದ ಬಗ್ಗೆ ಹೆಮ್ಮೆಯನ್ನು ವ್ಯಕ್ತಪಡಿಸಿದ್ದಾರೆ. ಈ ವೆಬ್‌ಸೈಟ್‌ನ್ನು ನಮ್ಮ ಶಾಲೆಗೆ ಉಚಿತವಾಗಿ ನೀಡಿ ಅದನ್ನು ಆಗಾಗ ನವೀಕರಿಸುವ ನಮ್ಮ ಶಾಲಾ ಉದಾರದಾನಿಯಾದ ಶ್ರೀಯುತ ನವೀನ್ ಡಿಸೋಜಾರವರಿಗೆ ನಾನು ಸದಾ ಚಿರಋಣಿ. ನಮ್ಮ ಶಾಲೆಗೆ ಉದಾರ ದಾನಿಗಳ ಸಂಖ್ಯೆ ಹೆಚ್ಚುತ್ತಾ ಬರುತ್ತದೆ. ಶ್ರೀಮತಿ ಎಲಿಜಬೆತ್ ಕುಲಾಸೊರವರು ಅವರ ಅಣ್ಣ ದಿವಂಗತ ಬೆರ್ತ್ರಾಮ್ ಕುಲಾಸೊರವರ ಸವಿನೆನಪಿಗಾಗಿ ರೂಪಾಯಿ ಒಂದು ಲಕ್ಷವನ್ನು ಬಡವಿದ್ಯಾರ್ಥಿಗಳ ಕಲ್ಯಾಣ ನಿಧಿಗೆ ನೀಡಿದ್ದಾರೆ. ಅವರಿಗೂ, ಇದಕ್ಕೆ ಪ್ರೇರಣೆಯನ್ನು ನೀಡಿದ ಕಳೆದ ವರ್ಷದ ದಾನಿ ಶ್ರೀ ಲೂಯಿಸ್ ಸಲ್ಡಾನರವರಿಗೆ ನಮ್ಮ ಅನಂತಾನಂತ ವಂದನೆಗಳು. ನಮ್ಮ ಶಾಲೆಯಲ್ಲಿ ನಡೆಯುವ ವಿವಿದ ಹಬ್ಬಗಳ ಸಂದರ್ಭದಲ್ಲಿ ಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಲು ಸಹಕರಿಸಿದ ಶ್ರೀಯುತ ರೊನಾಲ್ಡ್ ಸಿಕ್ವೇರಾ ಹಾಗೂ ಸುನಿಲ್ ರೊಡ್ರಿಗ್ಸ್‌ರವರಿಗೆ ನಮ್ಮ ನಮನಗಳು. ಬಡ ಮಕ್ಕಳಿಗೆ ಸಮವಸ್ತ್ರ ಹಾಗೂ ವಿದ್ಯಾರ್ಥಿ ವೇತನವನ್ನು ನೀಡಲು ಸಹಕರಿಸಿದ ಹಲವರನ್ನು ಪ್ರತ್ಯೇಕವಾಗಿ ಸುನಿಲ್ ಬ್ಯಾಪ್ಟಿಸ್ಟ್‌ರವರನ್ನು ನಾವು ಮರೆಯುವಂತಿಲ್ಲ.

ಮುಂಬರುವ ಯೋಜನೆಗಳು:– ಬರುವ ಶೈಕ್ಷಣಿಕ ವರ್ಷಕ್ಕೆ ಬೇಕಾದ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾರ್ಯವು ಬರದಿಂದ ಸಾಗುತ್ತಿದೆ. ಎರಡನೇ ಅಂತಸ್ತಿನಲ್ಲಿ ಸುಮಾರು 16 ತರಗತಿ ಕೊಠಡಿಗಳು, ಹಾಗೂ ಮೂರನೇ ಮಹಡಿನಲ್ಲಿ ಶಾಲಾ ಸಭಾಂಗಣ ಮತ್ತು ವಿವಿಧ ಪ್ರಯೋಗಾಲಯದ ಕೊಠಡಿಗಳು ಇದೇ ಎಪ್ರೀಲ್ ತಿಂಗಳಲ್ಲಿ ಉದ್ಘಾಟಣೆಗೆ ಸಿದ್ದವಾಗಲಿವೆ. ಅದೇ ರೀತಿ ಗುರು ನಿವಾಸ ಹಾಗೂ ಬೋರ್ಡಿಂಗ್ ಸಹಾ ಸಿದ್ಧವಾಗುತ್ತಿದೆ. ಸುಮಾರು 100 ಬಡ ಹಾಗೂ ಪ್ರತಿಭಾವಂತ ಮಕ್ಕಳಿಗೆ ಉಚಿತವಾಗಿ ಶಿಕ್ಷಣ ನೀಡಲು ಒಂದು ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲು ಶಾಲಾ ಆಡಳಿತ ಮಂಡಳಿಯು ಗಂಭೀರವಾಗಿ ಚಿಂತನೆ ನಡೆಸುತ್ತಿದೆ; ಇದಕ್ಕೆ ತಾವೆಲ್ಲರೂ ನಮ್ಮ ಜೊತೆ ಕೈಜೋಡಿಸಬೇಕೆಂದು ನಮ್ಮ ಕಳಕಳಿಯ ವಿನಂತಿ. ಈ ನಮ್ಮ ಶಾಲಾ ಆವರಣದಲ್ಲಿರುವ ಸುಮಾರು 12 ಎಕ್ರೆ ಜಮೀನಿನಲ್ಲಿ ಯೋಜಿಸಿದ ಹಲವಾರು ಯೋಜನೆಗಳು ಪ್ರತ್ಯೇಕವಾಗಿ ಎಲ್.ಕೆ.ಜಿ.ಯಿಂದ ಕಾಲೇಜ್‌ವರೆಗೆ ಶಿಕ್ಷಣ ನೀಡಲು ಹಾಗೂ ವಿವಿಧ ಪಠ್ಯೇತರ ಚಟುವಟಿಕೆಗಳಿಗೆ ಆಧ್ಯತೆಯನ್ನು ನೀಡಿ ಸೇವಾ ಸಂಸ್ಥೆಯಾಗಬೇಕೆಂಬ ನಮ್ಮ ಕನಸು ನನಸಾಗಲು ನಿಮ್ಮೆಲ್ಲರ ಸಹಕಾರ ಅತ್ಯಗತ್ಯ. ಶಾಲಾ ಕೊಠಡಿಗಳನ್ನು ನಿರ್ಮಿಸಲು ಬೇಕಾದ ಅನುಮತಿ ಹಾಗೂ ಪರವಾನಿಗೆಯನ್ನು ಮುಕ್ತಮನಸ್ಸಿನಿಂದ ನೀಡಿದ ಮೂಗ್ತಿಹಳ್ಳಿ ಪಂಚಾಯತಿಯ ಅಧ್ಯಕ್ಷರಿಗೆ, ಸರ್ವ ಸದಸ್ಯರಿಗೆ ಹಾಗೂ ಕಾರ್ಯದರ್ಶಿಯವರಿಗೆ ನಮ್ಮ ಅನಂತ ಧನ್ಯವಾದಗಳು.

ಈ ಹಳ್ಳಿ ಪ್ರದೇಶದಲ್ಲಿ ಪ್ರಾರಂಭವಾದ ನಮ್ಮ ಶಾಲೆಯ ಮೇಲೆ ಅತೀ ಹೆಚ್ಚಿನ ಅಭಿಮಾನವನ್ನಿಟ್ಟ 457 ಮಕ್ಕಳ ತಂದೆತಾಯಂದಿರಿಗೆ ಅಭಿನಂದನೆಯನ್ನು ಸಲ್ಲಿಸುತ್ತಾ, ನನಗೆ ಸರ್ವ ಸಹಕಾರ ಹಾಗೂ ಪ್ರೋತ್ಸಾಹವನ್ನು ನೀಡಿದ ಶಾಲಾ ಆಡಳಿತ ಮಂಡಳಿಗೂ, ಶಾಲಾ ಶಿಕ್ಷಕ/ಶಿಕ್ಷಕಿಯರಿಗೂ, ಎಲ್ಲಾ ಸಿಬ್ಬಂದಿವರ್ಗದವರಿಗೂ, ಪೋಷಕ/ಶಿಕ್ಷಕ ಸಮಿತಿಯ ಎಲ್ಲಾ ಸದಸ್ಯರಿಗೂ, ಅನಂತಾನಂತ ವಂದನೆಗಳನ್ನು ಸಲ್ಲಿಸುತ್ತೇನೆ. ಅವಿರತವಾಗಿ ವಿವಿದ ರೀತಿಯಲ್ಲಿ ಶಾಲಾಭಿವೃದ್ಧಿಗೋಸ್ಕರ ಶ್ರಮಿಸಿದ ನಿಮಗೆಲ್ಲರಿಗೂ ಭಗವಂತನು ಆಶೀರ್ವದಿಸಲೆಂದು ಪ್ರಾರ್ಥಿಸಿ, ಶಾಲಾ ಪಾಲಕರಾದ ದಿವ್ಯ ಬಾಲಯೇಸುವಿನ ಕೃಪೆ ಹಾಗೂ ದಯೆಯು ನಿಮಗೆ ಧಾರಾಳವಾಗಿ ಪ್ರಾಪ್ತವಾಗಲೆಂದು ಪ್ರಾರ್ಥಿಸುತ್ತೇನೆ. ವೇದಿಕೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಗಣ್ಯರಿಗೂ ನಮ್ಮ ಶಾಲೆಯ ಮೇಲೆ ಅಭಿಮಾನವನ್ನಿಟ್ಟು, ಶಾಲಾ ವಾರ್ಷಿಕೋತ್ಸವದ ಉತ್ಸಹದಲ್ಲಿ ಭಾಗಿಯಾದ ಸರ್ವರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ. ಶಾಲಾಪಾಲಕರಾದ ಬಾಲಯೇಸುವಿನ ಕೃಪೆ ಹಾಗೂ ದಯೆಯು ನೆರೆದ ನಿಮ್ಮೆಲ್ಲರೊಡನೆ ಸದಾ ಮನೆಮಾಡಲಿ. ಜೈ ಹಿಂದ್, ಜೈ ಕರ್ನಾಟಕ, ಜೈ ಇನ್ಫೆಂಟ್ ಜೀಸಸ್ ಶಾಲೆ.

ಬ್ರ. ವಿಕ್ಟರ್ ಕ್ರಾಸ್ತಾ, ಕಪುಚಿನ್
ಮುಖ್ಯೋಪಾಧ್ಯಾಯರು.....